
■ ಶಶಿಕುಮಾರ್ ಸಿ.

# ರಸ್ತೆಯಿಂದ ಚಾರ್ಜಿಂಗ್!



ಎಲೆಕ್ಟ್ರಿಕ್ ವಾಹನಗಳತ್ತ ವಿಶ್ವದಾದ್ಯಂತ ಒಲವು ಹೆಚ್ಚುತ್ತಿದ್ದು, ಇದಕ್ಕೆ ತಕ್ಕಂತೆ ಮೂಲಭೂತ ಸೇವೆಗಳನ್ನೂ ಒದಗಿಸುವ ನಿಟ್ಟಿನಲ್ಲಿ ಹೊಸ ಹೊಸ ಸಾಧ್ಯತೆಗಳ ಆವಿಷ್ಕಾರವೂ ಆಗುತ್ತಿದೆ. ಈಚೆಗೆ ನಾರ್ವೆ ದೇಶದ ಟ್ರೊಂಡ್‌ಹೈಮ್‌ನಲ್ಲಿ ಇಸ್ರೇಲ್ ಮೂಲದ ಹೈಟೆಕ್ ಕಂಪನಿಯಾದ 'ಎಲೆಕ್ಟ್ರಿಯಾನ್ ವೈರ್‌ಲೆಸ್' ಎಲೆಕ್ಟ್ರಿಕ್ ವಾಹನಗಳು ರಸ್ತೆ ಮೇಲೆ ಚಲಿಸುವಾಗಲೇ ಚಾರ್ಜ್ ಆಗುವಂತಹ ರಸ್ತೆಯನ್ನು ನಿರ್ಮಿಸಿದೆ.

ಇಂತಹದೊಂದು ಅನ್ವೇಷಣೆಯನ್ನು ಕೆಲ ತಿಂಗಳ ಹಿಂದೆಯೇ ಪರಿಚಯಿಸಿದ್ದ ಕಂಪನಿ, ಈಚೆಗೆ ಪ್ರಾಯೋಗಿಕ ಪರೀಕ್ಷೆ ನಡೆಸಿ ಯಶಸ್ವಿಯಾಗಿದೆ. ವಿಶೇಷ ರಸ್ತೆಯಲ್ಲಿ ಸಾಗುವಾಗ ವಾಹನ ಚಾಲಕರು ಚಾಲನೆ ವೇಳೆಯೇ ವಾಹನಗಳನ್ನು ಚಾರ್ಜ್ ಮಾಡಬಹುದು. ಈ ರಸ್ತೆಯಲ್ಲಿ ಮೇಲ್ಭಾಗದಲ್ಲಿ ವಿಶೇಷ ತಾಮ್ರದ ಪಟ್ಟಿಗಳನ್ನು ಅಳವಡಿಸಲಾಗಿದ್ದು, ಎಲೆಕ್ಟ್ರಿಕ್ ವಾಹನಗಳು ರಸ್ತೆಯ ಮೇಲೆ ಚಲಿಸಿದಾಗ ವಾಹನಗಳು ತಂತಾನೇ ಚಾರ್ಜ್ ಆಗುತ್ತವೆ.

ಸುಮಾರು 100 ಮೀಟರ್ ಉದ್ದದ ವೈರ್‌ಲೆಸ್ ಚಾರ್ಜಿಂಗ್ ರಸ್ತೆಯನ್ನು ಕಂಪನಿ ನಿರ್ಮಿಸಿದೆ. ಅದರ ಮೇಲೆ ಚೀನಾದ ಯುಟಾಂಗ್ ಕಂಪನಿಯ ಮೂರು ಎಲೆಕ್ಟ್ರಿಕ್ ಬಸ್‌ಗಳು ಮತ್ತು ಹೈಗರ್ ಕಂಪನಿಯ ಒಂದು ಬಸ್ಸನ್ನು ಪ್ರಾಯೋಗಿಕ ಪರೀಕ್ಷೆಗೆ ಒಳಪಡಿಸಲಾಗಿದೆ. ಕಂಪನಿಯು ಒಂದು ವರ್ಷದವರೆಗೆ ಈ ರಸ್ತೆಯ ಮೇಲೆ ತೀವ್ರ ನಿಗಾವಹಿಸಲಿದ್ದು, ಇದು ಯಶಸ್ವಿಗೊಂಡರೆ ದೊಡ್ಡ ಮಟ್ಟದಲ್ಲಿ ಇಂತಹ ರಸ್ತೆಗಳ ನಿರ್ಮಾಣಕ್ಕೆ ಸ್ಫೂರ್ತಿಯಾಗಲಿದೆ.

ರಸ್ತೆ ಮೇಲೆ ಚಲಿಸುವಾಗಲೇ ವಾಹನಗಳು ಚಾರ್ಜಿಂಗ್ ಮಾಡುವ ಕಲ್ಪನೆ ಅದ್ಭುತವಾಗಿದ್ದು, ಇದರ ಸಾಧಕ–ಬಾಧಕಗಳ ಬಗ್ಗೆ ಸಂಶೋಧನೆ ನಡೆಯುತ್ತಿದೆ. ಇದು ಪರಿಸರಕ್ಕೂ ಪೂರಕವಾಗಿದ್ದು, ಎಲೆಕ್ಟ್ರಿಕ್ ಕಾರುಗಳ ಬಳಕೆಗೆ ಪ್ರೇರಣೆಯಾಗಲಿದೆ. ■

## ವಾಟ್ಸ್‌ಆ್ಯಪ್: ಹೊಸ ನಿರೀಕ್ಷೆ

ಮೆಟಾ ಒಡೆತನದ ವಾಟ್ಸ್‌ಆ್ಯಪ್‌ನಲ್ಲಿ ಮೆಸೇಜಿಂಗ್ ಆಯ್ಕೆಯಷ್ಟೇ ಜನಪ್ರಿಯವಾದದ್ದು, ವಾಟ್ಸ್‌ಆ್ಯಪ್ ಸ್ಟೇಟಸ್ ಫೀಚರ್. ಸ್ಟೇಟಸ್ ಆಯ್ಕೆಯಲ್ಲಿ ಈಚೆಗೆ ಬದಲಾವಣೆ ತಂದಿರುವ ಕಂಪನಿಯು, ವಾಟ್ಸ್‌ಆ್ಯಪ್ ಸ್ಟೇಟಸ್‌ಗೆ 2 ನಿಮಿಷದಷ್ಟು ವಿಡಿಯೊ ಅಪ್‌ಲೋಡ್ ಮಾಡುವ ಅವಕಾಶವನ್ನು ಕಲ್ಪಿಸಲು ಮುಂದಾಗಿದೆ.

ಸದ್ಯ ವಾಟ್ಸ್‌ಆ್ಯಪ್‌ನಲ್ಲಿ 1 ನಿಮಿಷ ಅವಧಿಯ ವಿಡಿಯೊಗಳನ್ನು ಸ್ಟೇಟಸ್‌ನಲ್ಲಿ ಅಪ್‌ಲೋಡ್ ಮಾಡಬಹುದಾಗಿದೆ. ಸದ್ಯದಲ್ಲೇ ಈ ಮಿತಿಯು ಎರಡು ನಿಮಿಷಕ್ಕೆ ಏರಿಕೆಯಾಗಲಿದ್ದು, ಅದು ಸಾಧ್ಯವಾದರೆ ದೀರ್ಘಾವಧಿಯ ವಿಡಿಯೊ ಹಂಚಿಕೊಳ್ಳಬಹುದಾಗಿದೆ.

## ಫೈಲ್ ಶೇರ್; ಅಂತರ್ಜಾಲ ಬೇಕಿಲ್ಲ!

ಇಂಟರ್‌ನೆಟ್ ಇಲ್ಲದೆ ಫೈಲ್ ಅಥವಾ ಫೋಟೊ ಶೇರ್ ಮಾಡುವ ಆಯ್ಕೆಯನ್ನು ಸದ್ಯದಲ್ಲೇ ಪರಿಚಯಿಸಲಿದೆ ಎಂದು ವರದಿಯಾಗಿದೆ. ಈ ಫೀಚರ್ ಬಿಡುಗಡೆಯಾದಲ್ಲಿ ಆಫ್‌ಲೈನ್ ಮೋಡ್‌ನಲ್ಲಿ ಫೈಲ್ ಹಂಚಿಕೊಳ್ಳುವ ಅವಕಾಶವು ಲಭ್ಯವಾಗಲಿದ್ದು, ಅದಕ್ಕಾಗಿ ಬ್ಲೂಟೂತ್ ಬಳಕೆಯಾಗಲಿದೆ. ವಾಟ್ಸ್‌ಆ್ಯಪ್‌ನಲ್ಲಿ ಇದುವರೆಗೆ ಬ್ಲೂಟೂತ್ ಸೇವೆ ಇರಲಿಲ್ಲ. ಭವಿಷ್ಯದಲ್ಲಿ ವಾಟ್ಸ್‌ಆ್ಯಪ್ ಬ್ಲೂಟೂತ್ ನೆರವಿನಿಂದ ಅಂತರ್ಜಾಲ ನೆರವಿಲ್ಲದಿದ್ದರೂ ಕಡತಗಳನ್ನು ಹಂಚಿಕೊಳ್ಳಬಹುದಾಗಿದೆ. ಈ ಫೀಚರ್ ಅನ್ನು ವಾಟ್ಸ್‌ಆ್ಯಪ್ ಬೀಟಾ ಬಳಕೆದಾರರಿಗೆ ಸದ್ಯ ಒದಗಿಸಲಾಗಿದ್ದು, ಪ್ರಾಯೋಗಿಕ ಪರೀಕ್ಷೆಗಳು ಯಶಸ್ವಿಯಾದ ಬಳಿಕ ಎಲ್ಲ ಬಳಕೆದಾರರಿಗೂ ಫೀಚರ್ ಲಭ್ಯವಾಗಲಿದೆ. ■

## ಜೊತೆಗೂಡಿದ ಏರ್‌ಟೆಲ್–ಸ್ಟಾರ್‌ಲಿಂಕ್



ಉಪಗ್ರಹ ಆಧರಿತ ಅಂತರ್ಜಾಲ ಸೇವೆ ಒದಗಿಸುವ ಮೂಲಕ ಅಮೆರಿಕ ಸೇರಿದಂತೆ ಕೆಲವು ದೇಶಗಳಲ್ಲಿ ಹೆಚ್ಚು ಮನ್ನಣೆ ಗಳಿಸಿರುವ ಎಲಾನ್ ಮಸ್ಕ್ ಒಡೆತನದ ಸ್ಟಾರ್‌ಲಿಂಕ್, ಭಾರತ ಪ್ರವೇಶಿಸುವ ಹಾದಿ ಸುಲಭಗೊಂಡಿದೆ.

ಭಾರತದಲ್ಲಿ ಈಗಾಗಲೇ ಆಳವಾಗಿ ಬೇರುಬಿಟ್ಟಿರುವ ಟೆಲಿಕಾಂ ಸಂಸ್ಥೆಯಾದ ಏರ್‌ಟೆಲ್ ಜೊತೆ ಸ್ಟಾರ್‌ಲಿಂಕ್ ಕೈಜೋಡಿಸಿದೆ. ಸ್ಟಾರ್‌ಲಿಂಕ್‌ನ ಉಪಗ್ರಹ ಆಧರಿತ ಅಂತರ್ಜಾಲ ಸೇವೆಯನ್ನು ಏರ್‌ಟೆಲ್ ದೇಶದಲ್ಲಿ ತನ್ನ ಗ್ರಾಹಕರಿಗೆ ಒದಗಿಸಲಿದೆ.

ಹೊಸ ಒಪ್ಪಂದದನ್ವಯ ಸ್ಟಾರ್‌ಲಿಂಕ್‌ನ ಸೇವೆಗಳನ್ನು ಭಾರತದಲ್ಲಿ ಮಾರಾಟ ಮಾಡುವ ಅಧಿಕಾರವನ್ನು ಏರ್‌ಟೆಲ್ ಪಡೆಯಲಿದೆ. ಸ್ಟಾರ್‌ಲಿಂಕ್ ಸೇವೆಗಳನ್ನು ಏರ್‌ಟೆಲ್ ಮೂಲಕ ಉದ್ಯಮಿಗಳಿಗೆ, ಸಮುದಾಯ, ಶಾಲೆ, ಆರೋಗ್ಯ ಕೇಂದ್ರಗಳು ಹಾಗೂ ದುರ್ಗಮ ಸ್ಥಳಗಳಿಗೆ ನೇರವಾಗಿ ಉಪಗ್ರಹ ಆಧರಿತ ಅಂತರ್ಜಾಲ ಸೇವೆ ಒದಗಿಸಬಹುದಾಗಿದೆ. ಈ ಸೇವೆ ಆರಂಭಿಸಲು ಸ್ಟಾರ್‌ಲಿಂಕ್ ಬಹುದಿನಗಳಿಂದ ಸರ್ಕಾರದ ಅನುಮತಿ ಕಾಯುತ್ತಿತ್ತು. ಕೊನೆಗೂ ಅನುಮತಿ ಪಡೆದುಕೊಂಡಿದ್ದು, ಇದರನ್ವಯ ಮುಂದಿನ ಐದು ವರ್ಷಗಳವರೆಗೆ ಏರ್‌ಟೆಲ್ ಸ್ಟಾರ್‌ಲಿಂಕ್‌ನ ಸೇವೆಗಳನ್ನು ಒದಗಿಸಬಹುದಾಗಿದೆ. ■